ಮಗ: ಅಪ್ಪಾ, ಈ ಅರ್ಜಿ ಫಾರಂನಲ್ಲಿ 'ಮದರ್‌ಟಂಗ್' ಎಂಬ ಕಾಲಂ ಇದೆಯಲ್ಲ ಅದರ ಎದುರಿಗೆ ಏನೆಂದು ಬರೆಯಲಿ?

ತಂದೆ: ತುಂಬಾ ಉದ್ದ ಎಂದು ಬರೆ.

★★★

ರಸ್ತೆಯ ಮೇಲೆ ಒಂದು ಅಪಘಾತ ಸಂಭವಿಸಿತು. ಸುತ್ತಲೂ ಜನ ಸೇರಿದರು. ಆ ಕಡೆಯಿಂದ ಸಾಗುತ್ತಿದ್ದ ತಿಪ್ಪೇಶಿಗೆ ಅಲ್ಲೇನು ನಡೆದಿದೆ ಎಂದು ನೋಡುವ ಕುತೂಹಲ. ಆದರೆ ಜನ ದಾರಿ ಬಿಡಲೊಲ್ಲರು. ಆಗ ಅವನು ಜೋರಾಗಿ ಕೂಗಿದ. 'ದಯವಿಟ್ಟು ದಾರಿ ಬಿಡಿ. ಅಪಘಾತದಲ್ಲಿ ಮರಣ ಹೊಂದಿದವನು ನನ್ನ ತಂದೆ!' ಜನ ಅವನಿಗೆ ದಾರಿ ಬಿಟ್ಟರು. ತಿಪ್ಪೇಶಿ ಹೋಗಿ ನೋಡಿದರೆ ಕಾರಿಗೆ ಸಿಕ್ಕು ಒಂದು ಕತ್ತೆ ಸತ್ತು ಬಿದ್ದಿತ್ತು!

★★★

ಫಿಸಿಕ್ಸ್‌ನಲ್ಲಿ 18, ಕೆಮಿಸ್ಟ್ರಿಯಲ್ಲಿ 20, ಬಯಾಲಜಿಯಲ್ಲಿ 10, ಇಂಗ್ಲಿಷಿನಲ್ಲಿ 20, ಮ್ಯಾಥ್ಸ್‌ನಲ್ಲಿ 10, ಕನ್ನಡದಲ್ಲಿ 20, ಟೋಟಲ್ 98. 'ಟೋಟಲ್‌ನಲ್ಲಿ ಅದ್ಭುತ ಮಾರ್ಕ್ಸ್ ತೆಗೆದಿದ್ದೀಯಾ! ಆ ಸಬ್ಜೆಕ್ಟ್‌ನ ಉಪನ್ಯಾಕರು ಯಾರು..?'

– ಮಗನ ಪಿಯುಸಿ ಫಲಿತಾಂಶ ನೋಡಿದ ತಂದೆ ಮಗನಿಗೆ ಕೇಳಿದ.



★★★

ಸ್ಟೇಷನ್ ಮಾಸ್ಟರ್: ನೀನು ರೈಲು ಹಳಿಯ ಮೇಲೆ ಏಕೆ ಮಲಗಿರುವೆ.

ಪೆದ್ದ: ಜೀವನದಲ್ಲಿ ನಾನು ಅಂದುಕೊಂಡದ್ದು ಯಾವುದೂ ಆಗುತ್ತಿಲ್ಲ. ಆದ್ದರಿಂದ ಆತ್ಮಹತ್ಯೆ ಮಾಡಿಕೊಳ್ಳಬೇಕೆಂದಿದ್ದೇನೆ.

ಸ್ಟೇಷನ್ ಮಾಸ್ಟರ್: ಇಂದೂ ನೀನಂದುಕೊಂಡದ್ದು ಆಗುವುದಿಲ್ಲ. ಏಕೆಂದರೆ ಇವತ್ತು ರೈಲ್ವೆ ಸ್ಟ್ರೈಕ್ ಇದೆ.

★★★

ಅಪ್ಪು: ಅಮ್ಮಾ ಅಪ್ಸರೆಯರು ಆಕಾಶದಲ್ಲಿ ಹಾರುತ್ತಾರೆಯೇ?

ತಾಯಿ: ಹೌದು ಮಗು.

ಅಪ್ಪು: ಹಾಗಾದರೆ ನಮ್ಮ ಮನೆಗೆಲಸದ ಆಂಟಿ ಏಕೆ ಆಕಾಶದಲ್ಲಿ ಹಾರುವುದಿಲ್ಲ.

ತಾಯಿ: ಏಕೆಂದರೆ ಅವಳು ಅಪ್ಸರೆಯಲ್ಲ!

ಅಪ್ಪು: ಆದರೆ, ಡ್ಯಾಡಿ ಅವಳನ್ನು ಯಾವಾಗಲೂ ಅಪ್ಸರೆಯೆಂದು ಹೇಳುತ್ತಿರುತ್ತಾರಲ್ಲ.

ತಾಯಿ: ಹೀಗೋ ಸಮಾಚಾರ. ನೋಡ್ತಾ ಇರು. ನಾಳೆ ಬೆಳಗಾಗುವಷ್ಟರಲ್ಲಿ ಅವಳು ಹಾರಿರುತ್ತಾಳೆ!

★★★

ರೋಗಿ: ಸಿಸ್ಟರ್ ನೀವು ನನ್ನ ಹೃದಯವನ್ನು ಕದ್ದಿರುವಿರಿ

ನರ್ಸ್: ನಾನು ನಿಮ್ಮ ಹೃದಯವನ್ನು ಕದಿಯುವುದಕ್ಕೆ ಮೊದಲೇ ಡಾಕ್ಟ್ರು ನಿಮ್ಮ ಕಿಡ್ನಿಯನ್ನು ಕದ್ದಿದ್ದಾರೆ ಗೊತ್ತಾ?

★★★

ಪತಿ: ಒಂದು ವೇಳೆ ನಾನು ತಪ್ಪಿಸಿಕೊಂಡರೆ ನೀನೇನು ಮಾಡ್ತಿಯಾ?

ಪತ್ನಿ: ಪೇಪರಿನಲ್ಲಿ ಜಾಹೀರಾತು ನೀಡುತ್ತೇನೆ.

ಪತಿ: ಏನೆಂದು?

ಪತ್ನಿ: ಪತಿ ಬೇಕೆಂದು.

★★★

ರೇಡಿಯೋ ಜಾಕಿ: ಎಫ್‌ಎಂ ರೇಡಿಯೋ ಬಂದ ಮೇಲೆ ನಿಮಗೆ ಖುಷಿ ಆಗಿದೆಯೇ?

ಬಸ್ ಕಂಡಕ್ಟರ್: ಹೌದು

ರೇಡಿಯೋ ಜಾಕಿ: ಯಾವ ಕಾರಣಕ್ಕಾಗಿ ಎಂದು ತಿಳಿಯಬಹುದೆ?

ಬಸ್ ಕಂಡಕ್ಟರ್: ಎಫ್‌ಎಂ ರೇಡಿಯೋ ಹಾಡು ಕೇಳುವ ಗುಂಗಿನಲ್ಲಿ ಪ್ರಯಾಣಿಕರು ಚಿಲ್ಲರೆ ಮರೆತು ಬಿಡುತ್ತಾರೆ.

(ಸಂಗ್ರಹ) **ಮುರಲೀಧರ ಕುಲಕರ್ಣಿ, ಬೀದರ್**

ಹೆಂಡತಿ: ಏನ್ರಿ ನಾನು ನಿಮಗಿಂತಾ ಮೊದಲೇ ಸತ್ತು ಹೋದರೆ ನೀವು ಮತ್ತೆ ಮದುವೆ ಆಗ್ತೀರಾ?

ಗಂಡ: ಹೂಂ ಅಂದ್ರೆ ನಿನಗೆ ಕೋಪ. ಇಲ್ಲಾಂದ್ರೆ ಅವಳಿಗೆ ಕೋಪ!

★★★

ಗಂಡ: ಏನೇ ನಾನು ನಿನಗಿಂತ ಮುಂಚೆ ಸತ್ತು ಹೋದರೆ ನೀನೇನು ಮಾಡ್ತೀಯ?

ಹೆಂಡತಿ: ದುಃಖಪಡ್ತೀನಿ. ಆ ಮೇಲೆ ನನ್ನ ತಂಗಿ ಜೊತೆ ಹಾಯಾಗಿ ಇರ್ತೀನಿ. ಅದ್ಸರಿ. ನೀವೇನು ಮಾಡ್ತೀರಿ– ನಾನು ನಿಮಗಿಂತ ಮುಂಚೇನೇ ಹೋಗಿ ಬಿಟ್ಟರೆ?

ಗಂಡ: ನಾನೂ ಅಷ್ಟೇ. ದುಃಖ ಪಡ್ತೀನಿ. ಆ ಮೇಲೆ ನಿನ್ನ ತರಹಾನೆ ನಾನೂ ನಿನ್ನ ತಂಗಿ ಜೊತೆ ಹಾಯಾಗಿ ಇದ್ದು ಬಿಡ್ತೀನಿ.

(ಸಂಗ್ರಹ) **ಎಂ. ಆರ್. ಮುಕುಂದ**

